ಕರ್ನಾಟಕ ಸರ್ಕಾರ

ಮೇ 11, 2017

# ಮಾಧ್ಯಮದವರ ಜೊತೆ ಮುಖ್ಯಮಂತ್ರಿ ಸಂವಾದಕ್ಕೆ ನೂತನ ವೇದಿಕೆ
# ಕೃಷ್ಣಾದಲ್ಲಿ ವರುಣ !



ಬೆಂಗಳೂರು, ಮೇ 11 :

ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾ ಪ್ರಾಂಗಣದಲ್ಲಿ ವರುಣ ಮೈದೇಳಿದೆ ! ಮುಖ್ಯಮಂತ್ರಿಯವರ ಸಂದೇಶಗಳ ಧ್ವನಿಮುದ್ರಣಕ್ಕೆ, ಮಾಧ್ಯಮದವರೊಂದಿಗೆ ಸಂವಾದ ಹಾಗೂ ಸಂದರ್ಶನಗಳಿಗೆ ಅನುವಾಗುವಂತೆ ರೂಪಿಸಿರುವ ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಸೌಲಭ್ಯಗಳ ಹೊತ್ತ ಈ ನೂತನ ವೇದಿಕೆ ವರುಣ ಸ್ಟೂಡಿಯೋವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿ ಇಂದು ಉದ್ಘಾಟಿಸಿದರು. ಸ್ಟೂಡಿಯೋದ ಮುಂಭಾಗದಲ್ಲಿ ಸಸಿ ನೆಟ್ಟದು ಮತ್ತೊಂದು ವಿಶೇಷ.

ಬೆಳಕಿನ ಸೌಲಭ್ಯ (LIGHTING FACILITY), ಧ್ವನಿಜ್ಞಾನ (ACOUSTICS) ಹಾಗೂ ಧ್ವನಿಗ್ರಹಣ (RECORDING) ವ್ಯವಸ್ಥೆ, ಅವಶ್ಯಕತೆಗೆ ಅನುಗುಣವಾಗಿ ಬದಲಾಯಿಸಬಹುದಾದ ಪರದೆ (BACKDROP, CHANGEABLE ACCORDING TO REQUIREMENT), ಮೂಡುವ ಅಕ್ಷರಗಳ ನೋಡುವ ತೆರೆ (TELEPROMPTER), ಗಣಕಗಳು (COMPUTERS) ಸುಖಾಸೀನ ಆಸನಗಳು, ತಂಪೆರೆವ ಹವಾನಿಯಂತ್ರಿತ ವ್ಯವಸ್ಥೆ ವರುಣ ಸ್ಟೂಡಿಯೋದ ಆಕರ್ಷಣೆಗಳಾಗಿವೆ.

ಮಳೆಯ ದೇವರ ಹೆಸರಿನಲ್ಲಿ ನಿರ್ಮಿಸಿರುವ ಈ ಸ್ಟೂಡಿಯೋದಲ್ಲಿ ಮುಖ್ಯಮಂತ್ರಿಯವರೊಂದಿಗೆ ಸಂದರ್ಶನ ನಡೆಸುವಾಗ ಮಾಧ್ಯಮದವರು ಪ್ರಶ್ನೆಗಳ ಮಳೆಗೆರೆಯಲು ಹಿತಕರ ವಾತಾವರಣವಿದೆ. ಮುಖ್ಯಮಂತ್ರಿಯವರ ಅಧಿಕೃತ ನಿವಾಸ ಕಾವೇರಿಯಲ್ಲಿನ ಸ್ಥಳಾಭಾವ ಹಾಗೂ ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿನ ಖಾಸಗೀತನದ ಕೊರತೆ ಇವೆರಡನ್ನೂ ವರುಣ ಸರಿದೂಗಿಸಲಿದೆ.

ವರುಣಾದ ಉದ್ಘಾಟನೆಯ ಸಂದರ್ಭದಲ್ಲಿ ರಾಜ್ಯ ವಿಧಾನ ಪರಿಷತ್ ಸದಸ್ಯ ಹೆಚ್ ಎಂ ರೇವಣ್ಣ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳಾದ ಎಲ್ ಕೆ ಅತೀಕ್ ಹಾಗೂ ತುಷಾರ್ ಗಿರಿನಾಥ್ ಅವರೂ ಸೇರಿದಂತೆ ಗಣ್ಯರು ಹಾಗೂ ಅಧಿಕಾರಿಗಳು ಹಾಜರಿದ್ದರು.

************

ಡಿ ಪಿ ಎಂ : ಟಿ ಸಿ ಎಂ ಬಿ